**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 2694/2021**

ಡಿ .ಡಬ್ಲ್ಯೂ: 1

ಹೆಸರು : ಶಿವರಾಜ್

ತಂದೆಯ ಹೆಸರು : ಲೇಟ್ ಎ ವಿ ಚಿನ್ನಪ್ಪ

ವಯಸ್ಸು : 63 ವರ್ಷ

ಉದ್ಯೋಗ : ನಿವೃತ್ತ ಮ್ಯಾನೇಜರ್

ವಾಸಸ್ಥಳ : ಭದ್ರಾವತಿ

**ದಿನಾಂಕ:12-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :** ಆರೋಪಿ ಪರ ವಕೀಲರಿಂದ.

ದೂರುದಾರರಾದ ಪ್ರವೀಣ್ ರವರು ಯಾರು ಎಂದು ನನಗೆ ತಿಳಿದಿರುವುದಿಲ್ಲ. ನಾನು ಅವರಿಂದ 15 ಲಕ್ಷ ಸಾಲವಾಗಿ ಪಡೆದಿರುವುದಿಲ್ಲ. ರಂಗೇನಹಳ್ಳಿ ಶಾಖೆಯ ವಿಜಯಾ ಬ್ಯಾಂಕಿನ ಮೂರು ಚೆಕ್ಕನ್ನು ನಾನು ಪ್ರವೀಣ್ ರವರಿಗೆ ನೀಡಿರುವುದಿಲ್ಲ. ದೂರುದಾರರ ಕಡೆಯಿಂದ ನನಗೆ ಲೀಗಲ್ ನೋಟೀಸ್ ಬಂದಿರುತ್ತದೆ. ಅದಕ್ಕೆ ನಾನು ಉತ್ತರ ನೀಡಿರುತ್ತೇನೆ. ನಾನು ರಂಗೇನಹಳ್ಳಿ ನವರತ್ನ ಪೈನ್ಸ್ ನ ರಾಜಶೇಖರ್ ರವರ ಹತ್ತಿರ ಹಂತ ಹಂತವಾಗಿ 5 ಲಕ್ಷ ಹಣವನ್ನು ಸಾಲವಾಗಿ ಪಡೆದಿದ್ದು, ಅದಕ್ಕೆ ಭದ್ರತೆಗಾಗಿ ವಿಜಯ್ ಬ್ಯಾಂಕ್ ರಂಗೇನಹಳ್ಳಿ ಶಾಖೆಯ 10 ಬ್ಲಾಂಕ್ ಚೆಕ್ಕುಗಳನ್ನು ಸಹಿ ಮಾಡಿ ರಾಜಶೇಖರ್ ರವರಿಗೆ ನಾನು ನೀಡಿರುತ್ತೇನೆ. ದಿನಾಂಕ: 20-07-2019 ರಂದು ನಾನು 5 ಲಕ್ಷ ಹಣವನ್ನು ರಾಜಶೇಖರ್ ರವರ ಬ್ಯಾಂಕ್ ಆಫ್ ಬರೋಡಾ ಖಾತೆಗೆ ಜಮಾ ಮಾಡಿರುತ್ತೇನೆ. ನಾನು ನೀಡಿದ ಚೆಕ್ಕುಗಳನ್ನು ವಾಪಾಸ್ಸು ನೀಡಲು ಕೇಳಿದಾಗ

ರಾಜಶೇಖರ್ ರವರು ಮನೆ ಬದಲಾವಣೆ ಮಾಡಿರುವ ಕಾರಣ ಚೆಕ್ಕುಗಳು ಸಿಗುತ್ತಿಲ್ಲ, ಸಿಕ್ಕಿದ ನಂತರ ಕೊಡುತ್ತೇನೆಂದು ತಿಳಿಸಿದರು. ಅದರಲ್ಲಿ ದೂರುದಾರರು ನನ್ನ ಮೂರು ಚೆಕ್ಕುಗಳನ್ನು ರಾಜಶೇಖರ್ ರವರಿಂದ ಪಡೆದುಕೊಂಡು ನನ್ನ ಮೇಲೆ ಈ ಸುಳ್ಳು ಪಿರ್ಯಾದನ್ನು ಮಾಡಿರುತ್ತಾರೆ. ಪಿರ್ಯಾದಿದಾರರು ರಾಜಶೇಖರ್ ರವರ ಅಕ್ಕನ ಮಗ ಆಗಿರುತ್ತಾರೆ. ವಿಜಯಾ ಬ್ಯಾಂಕ್ ಬ್ಯಾಂಕ್ ಆಫ್ ಬರೋಡಾಗೆ 2019 ನೇ ಇಸವಿಯಲ್ಲಿ ಮರ್ಜ ಆಗಿದ್ದು , ನಾನು ನಾನು ಬ್ಯಾಂಕ್ ಆಫ್ ಬರೋಡಾದಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ಒಲ್ಡ ಟೌನ್ ಭದ್ರಾವತಿಯಲ್ಲಿ 2023 ರವರೆಗೂ ಕೆಲಸ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ನನಗೆ ಒಂದು ಲಕ್ಷ ಹಣ ವೇತನ ಬರುತ್ತಿದ್ದು, ದೂರುದಾರರಿಂದ ಹಣ ಪಡೆಯುವ ಅಗತ್ಯ ಇರಲಿಲ್ಲ. ದೂರುದಾರರು ನನ್ನ ಮೇಲೆ ಸುಳ್ಳು ಪಿರ್ಯಾದಿಯನ್ನು ಸಲ್ಲಿಸಿರುತ್ತಾರೆ.

ನಾನು ನ್ಯಾಯಲಯಕ್ಕೆ ಎರಡು ರೀಲಿವಿಂಗ್ ಆರ್ಡರ್ ನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಡಿ-1 ಮತ್ತು ನಿಡಿ-2 ಎಂದು ಗುರುತಿಸಲಾಯಿತು. ದೂರುದಾರರು ನೀಡಿದ ಲೀಗಲ್ ನೋಟೀಸ್‌ಗೆ ರಿಪ್ಲೆ ನೋಟಿಸ್ ನೀಡಿದ್ದು, ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ರಾಜಶೇಖರ್ ರವರು ನೀಡಿದ ಲೀಗಲ್ ನೋಟಿಸ್ ಗೆ ರಿಪ್ಲೆ ನೋಟೀಸ್ ನೀಡಿದ್ದು, ಅದನ್ನು ನಿಡಿ-4 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು : ಆರೋಪಿ ಪರ ವಕೀಲರಿಂದ</u>**

ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.